ii) ಫೈಲ್ ಮಾಡಿರುವ ಪ್ರಕರಣಗಳ ಸಂಖ್ಯೆ :

೧೯೮೬-೮೭	...	ಇಲ್ಲ
೧೯೮೭-೮೮	...	ಇಲ್ಲ

ಒಂದು ಪ್ರಕರಣದಲ್ಲಿ 'ಬಿ' ವರದಿಯನ್ನು ಸಲ್ಲಿಸಲಾಗಿದೆ. ಇನ್ನುಳಿದ ಪ್ರಕರಣಗಳು ತನಿಖೆಯಲ್ಲಿವೆ.

ಕಾಕಂಬಿಯ ನಿಯಂತ್ರಣದಿಂದ ಸರ್ಕಾರಕ್ಕೆ ಬರಬೇಕಾದ ಆದಾಯದ ನಷ್ಟದ ಬಗ್ಗೆ

೧೬೦೩. ಶ್ರೀ ಎ. ಜಿ. ದೇಸಾಯಿ (ಧಾರವಾಡ-ಗ್ರಾಮೀಣ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾಕಂಬಿಯ ಮೇಲೆ ಕೇಂದ್ರ ಸರ್ಕಾರದ ನಿಯಂತ್ರಣವಿರುವುದರಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾದ ಆದಾಯ ನಷ್ಟವಾಗುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ಕೇಂದ್ರ ಸರ್ಕಾರದ ನಿಯಂತ್ರಣ ತೆಗೆದು ಹಾಕಿದಲ್ಲಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯ ಎಷ್ಟು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) 'ಅ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ ಮಾನ್ಯ ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಹಾಗೂ ವಿದ್ಯುತ್ ಮಂತ್ರಿ ಅವರ ಪರವಾಗಿ), ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೫ (ಎ) ಕಲಮಿನ ಮೇರೆಗೆ—

೧೯೮೫-೮೬ನೇ ಸಾಲಿನ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ಮೊದಲನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ಚಂದ್ರಶೇಖರಿರ್ (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿ ಅವರ ಪರವಾಗಿ).— ೧೯೬೪ನೇ ಇಸವಿಯ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಶಾಸನದ ೨೫ (೫ಎ) ಕಲಮಿನ ಮೇರೆಗೆ

೧೯೮೧-೮೨, ೧೯೮೨-೮೩ ಮತ್ತು ೧೯೮೩-೮೪ನೇ ಸಾಲುಗಳ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಲೆಕ್ಕಪತ್ರ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಶಿಡ್ಲಘಟ್ಟದಲ್ಲಿ ನಡೆದ ಕೋಮುಗಲಭೆ ಬಗ್ಗೆ

ಅಧ್ಯಕ್ಷರು.— ನಿನ್ನೆ ನಡೆದಂತಹ ಘಟನೆಯ ಬಗ್ಗೆ, ಮಾನ್ಯ ವೆಂಕಟರಾಮಯ್ಯನವರು ಮತ್ತು ತಾವು ನೋಟೀಸ್ ಕೊಟ್ಟಿದ್ದೀರಿ ಶಿಡ್ಲಘಟ್ಟದಲ್ಲಿ ನಡೆದಿರತಕ್ಕ ಘಟನೆ ಬಗ್ಗೆ ಚರ್ಚೆ ಮಾಡಲಿಕ್ಕೆ ನಿಲುವಳಿ ಸೂಚನೆ ಮೂಲಕ ತೆಗೆದುಕೊಳ್ಳಲಿಕ್ಕಾಗದಕ್ಕೆ ಆಗುವುದಿಲ್ಲ. ಅದನ್ನು ಗಮನ ಸೆಳೆಯುವ